# ದಿನಾಂಕ:07.03.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಂಖ್ಯೆ,38 ಹೆಚ್.ಎಂ.ಟಿ. ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

**ಹಾಜರಿದ್ದ ಅಧಿಕಾರಿಗಳು:**

1. ಹೆಚ್.ಭೀಮೇಶ್, ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ ನಿರ್ವಹಣೆ ಬಿಬಿಎಂಪಿ ಹಾಗೂ ವಾ.38ರ ನೋಡಲ್ ಅಧಿಕಾರಿಗಳು)
2. ಬಿ.ಎನ್.ಲಕ್ಷ್ಮೀಶ್ ಗೌಡ, ಸಹಾಯಕ ಅಭಿಯಂತರರು, (ವಾರ್ಡ್ ನಂ.38) ಮತ್ತು ಸಂಚಾಲಕರು.
3. ನಾರಾಯಣ್, ಹಿರಿಯ ಆರೋಗ್ಯ ಪರಿವೀಕ್ಷಕರು, (ವಾರ್ಡ್ ನಂ.38)
4. ಸತೀಶ್, ಕಂದಾಯ ಪರಿವೀಕ್ಷಕರು, ಹೆಚ್.ಎಂ.ಟಿ.ವಾರ್ಡ್ ನಂ.38.
5. ಬೈಲವೆಂಕಟಪ್ಪ, ಹೆಡ್ ಗ್ಯಾಂಗ್ ಮ್ಯಾನ್ ಹೆಚ್.ಎಂ.ಟಿ.ವಾರ್ಡ್ ನಂ.38.
6. ಮೋಹಿನಿ, ಲಿಂಕ್ ವರ್ಕರ್ ವಾರ್ಡ್ ನಂ.38.
7. ಭಾರತಿ, ಲಿಂಕ್ ವರ್ಕರ್ ವಾರ್ಡ್ ನಂ.38.
8. ರಾಜು, ಮರ್ಷಲ್ ವಾರ್ಡ್ ನಂ.38.
9. ಧನಂಜಯ, ಸೂಪರ್ ವೈಸರ್ ವಾರ್ಡ್ ನಂ.38.
10. ಹನುಮಂತಯ್ಯ, ಗುತ್ತಿಗೆದಾರು ವಾರ್ಡ್ ನಂ.38.
11. ಶ್ರೀ.ಶ್ರೀನಾಥ್.ಜಿ (ಪೀಣ್ಯ ಕೈಗಾರಿಕಾ ಸಂಘದ ಪದಾಧಿಕಾರಿ)
12. ಶ್ರೀ. ದಿವಾಕರ್ ಹೆಗಡೆ (ಪೀಣ್ಯ ಕೈಗಾರಿಕಾ ಸಂಘದ ಪದಾಧಿಕಾರಿ)
13. ಶ್ರೀಮತಿ.ತನುಜ (ಕಿರಿಯ ಆರೋಗ್ಯ ವೈಧ್ಯಾದಿಕಾರಿ)
14. ಶ್ರೀ.ಸಿದ್ದಯ್ಯ (ಬೆಸ್ಕಾಂ ಅಧಿಕಾರಿ)

ಮಾನ್ಯ ಅಧ್ಯಕ್ಷರು, ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 38ರ ಕಾರ್ಯದರ್ಶಿಗಳು ಹಾಗೂ ಕಂದಾಯ ಪರಿವೀಕ್ಷಕರನ್ನು ಸಭೆಯನ್ನುದ್ದೇಶಿಸಿ ಸ್ವಾಗತ ಕೋರಿದರು.

ಆರೋಗ್ಯ ಪರಿವೀಕ್ಷಕರು ರವರು ವಾರ್ಡ್ 38ರಲ್ಲಿ ಕೋವಿಡ್-19 ಪ್ರಕರಣಗಳು ತೀರಾ ಕಡಿಮೆ ಇದ್ದು, ಹಾಗೂ ಚುಚ್ಚುಮದ್ದು ನೀಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕ್ರಮಗಳು ಮುಂದುವರೆದಿರುತ್ತದೆ ಎಂದು ತಿಳಿಸಿರುತ್ತಾರೆ.

ಸಹಾಯಕ ಅಭಿಯಂತರರು ರವರು ಮಾತನಾಡಿ ಪೀಣ್ಯ ಇಂಡಸ್ಟ್ರಿಯಲ್ ಏರಿಯಾದ ಎಲ್ಲಾ ಕ್ರಾಸ್‌ಗಳಲ್ಲಿಯೂ ಡ್ರೈನ್ಸ್‌ಗಳು ಡಿಸಿಲ್ಟಿಂಗ್ ಆಗಬೇಕಿದ್ದು ಅದರ ಬಗ್ಗೆ ಕ್ರಮ ವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

ಸಭೆಗೆ ಹಾಜರಾಗಿದ್ದ ಸಾರ್ವಜನಿಕರು ಮಾತನಾಡಿ ಕೈಗಾರಿಕಾ ರಸ್ತೆಗಳಲ್ಲಿ ಕಸವನ್ನು ಎಲ್ಲಾ ಕಡೆ ರಾತ್ರಿ ಹೊತ್ತು ಅಪರಿಚಿತರು ಹಾಕುತ್ತಿರುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ಉತ್ತರವಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ರಾತ್ರಿ ಹೊತ್ತಿನಲ್ಲಿ ಮಾರ್ಷಲ್‌ಗಳು ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಸೂಕ್ತ ಕ್ರಮ ವಹಿಸಲು ಸೂಚನೆ ನೀಡಿ ಸೂಕ್ತ ಕ್ರಮ ವಹಿಸಲಾಗುವುದು ಹಾಗೂ ಕಳೆದ ಸಭೆಯಲ್ಲಿ ಇದೇ ಸಮಸ್ಯೆ ಬಗ್ಗೆ ತಿಳಿಸಿದ್ದು, ಕಸವನ್ನು ತೆಗೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

Scanned with CamScanner

ವಾರ್ಡಿನ ಮುಖ್ಯ ರಸ್ತೆಗಳಲ್ಲಿ ಮ್ಯಾಕಾನಿಕಲ್ ಸ್ವೀಪಿಂಗ್ ಅಗತ್ಯವಿದ್ದು, ಸದರಿ ಇಲಾಖೆಯವರೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕೇಬಲ್ ಅಳವಡಿಸಲು ಗುಂಡಿ ತೆಗೆದು ಮುಚ್ಚದಿರುವುದು ಕಂಡುಬಂದಿದ್ದು, ಅದನ್ನು ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸುವುದಾಗಿ ಅಧ್ಯಕ್ಷರು ತಿಳಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ಸಮಸ್ಯೆಯಿದ್ದು, ಅದನ್ನು ಕಾರ್ಯಪಾಲಕ ಅಭಿಯಂತರರೊಂದಿಗೆ ಅಧ್ಯಕ್ಷರು ದೂರವಾಣಿ ಮೂಲಕ ಮಾತನಾಡಿ ಸದರಿ ಸಮಸ್ಯೆಯನ್ನು ಬಗೆಹರಿಸಲು ಈಗಾಗಲೇ ತಿಳಿಸಿದ್ದು ಮತ್ತೊಮ್ಮೆ ಕರೆ ಮಾಡಿ ತುರ್ತಾಗಿ ಕ್ರಮವಹಿಸಲು ತಿಳಿಸಿರುತ್ತಾರೆ.

ಕೆ.ಇ.ಬಿ ಕ್ವಾಟ್ರಸ್‌ನಲ್ಲಿ ಬೀದಿ ದೀಪಗಳ ಸಮಸ್ಯೆಯ ಬಗ್ಗೆ ಶೀಘ್ರ ಕ್ರಮ ವಹಿಸುವುದಾಗಿ ಅಧ್ಯಕ್ಷರು ತಿಳಿಸಿರುತ್ತಾರೆ.

ವಾರ್ಡ್ ಕಛೇರಿಯ ರಸ್ತೆಯಲ್ಲಿ Desilting of Drains ಅದನ್ನು ಕೂಡಲೇ ತುರ್ತು ಕಾರ್ಯ ಯೋಜನೆಯಡಿಯಲ್ಲಿ ಎಸ್ಟಿಮೇಟ್ ಸಿದ್ಧಪಡಿಸಿ ಕೆಲಸ ಕೈಗೊಳ್ಳುವುದಾಗಿ ಸಹಾಯಕ ಅಭಿಯಂತರರು ಮತ್ತೊಮ್ಮೆ ತಿಳಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಹೆಚ್. ಭೀಮೇಶ್, ರವರು ಎಲ್ಲಾರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

B. Salt

ಸದಸ್ಯ ಕಾರ್ಯದರ್ಶಿ ಹಾಗೂ
ಕಂದಾಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ.38

**ಪ್ರತಿಯನ್ನು:**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನಗೆ ಸಲ್ಲಿಸಿದೆ.
3. ವಲಯ ಆಯುಕ್ತರು ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು ರಾಜರಾಜೇಶ್ವರಿನಗರವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner